



ಅರುಣ ಪಿ. ಭಟ್ಟ


## ವಾರ ಭವಿಷ್ಯ: 16.10.2025ರಿಂದ 22.10.2025ರವರೆಗೆ




ವ್ಯವಹಾರದಲ್ಲಿನ ಎಲ್ಲಾ ಸಮಸ್ಯೆಗಳು ಕಡಿಮೆಯಾಗುತ್ತವೆ. ನೀವು ಹೊಸ ಉದ್ಯೋಗಾವಕಾಶಗಳನ್ನು ಪಡೆಯುತ್ತೀರಿ. ಸರ್ಕಾರ ಮತ್ತು ಖಾಸಗಿ ವಲಯ ಎರಡರಲ್ಲೂ ಯಶಸ್ಸು ಪಡೆಯುವ ಅವಕಾಶ ಹೆಚ್ಚಿದೆ. ಇದಕ್ಕಾಗಿ ಹೆಚ್ಚಿನ ಪರಿಶ್ರಮ ಹಾಕಬೇಕು. ವ್ಯಾಪಾರ ವ್ಯವಹಾರ ಮಾಡುತ್ತಿರುವವರಿಗೆ ಲಾಭದ ಪ್ರಮಾಣ ಹೆಚ್ಚಲಿದೆ. ಶುಭದಿನ: 21. ನವದುರ್ಗಾ ಆರಾಧನೆ ಮಾಡಿರಿ.




ಏನಾದರೂ ಸಮಸ್ಯೆಗಳು ಕಾಡುತ್ತಿದ್ದಲ್ಲಿ ನಿವಾರಣೆ ಆಗುತ್ತವೆ. ಅದೃಷ್ಟ ನಿಮ್ಮ ಪಾಲಿಗೆ ಇರುತ್ತದೆ. ಉದ್ಯೋಗ ಸ್ಥಳದಲ್ಲೂ ನಿಮ್ಮ ಬಗ್ಗೆ ಗೌರವ ಹೆಚ್ಚಳವಾಗುತ್ತದೆ. ಸಹೋದ್ಯೋಗಿಗಳ ಪ್ರಗತಿಗೆ ಸಹಕಾರ ನೀಡಲಿದ್ದೀರಿ. ಅಗತ್ಯ ಇರುವವರಿಗೆ ಕೆಲಸ ಕೊಡಿಸಲು ಪ್ರಯತ್ನಿಸಲಿದ್ದೀರಿ. ಆರ್ಥಿಕ ಸ್ಥಿತಿಯನ್ನು ಸರಿಪಡಿಸಿಕೊಳ್ಳಲು ಸಾಧ್ಯವಾಗುತ್ತದೆ. ಜೀವನಶೈಲಿ ಉತ್ತಮವಾಗುತ್ತದೆ. ಶುಭದಿನ: 20. ಶ್ರೀರಾಮರಕ್ಷಾ ಸ್ತೋತ್ರ ಪಠಿಸಿ.





ನಿಮ್ಮ ಬಾಂಧವ್ಯಕ್ಕೆ ಇನ್ನಷ್ಟು ಗಟ್ಟಿತನ ಬರುತ್ತದೆ. ಕುಟುಂಬದಲ್ಲಿದ್ದ ಮನಸ್ತಾಪಗಳನ್ನು ದೂರ ಮಾಡುವುದಕ್ಕೆ ಪ್ರಯತ್ನ ಮಾಡಲಿದ್ದೀರಿ. ವೃತ್ತಿಪರ ಜವಾಬ್ದಾರಿಗಳನ್ನು ಪೂರೈಸುವುದಕ್ಕೆ ಹೆಚ್ಚು ಸಮಯ ಮೀಸಲಿಡಬೇಕಾಗುತ್ತದೆ. ಕೆಲವು ತಂತ್ರಗಳನ್ನು ಅನುಷ್ಠಾನ ಮಾಡುವ ಮೂಲಕ ಕೆಲಸಗಳನ್ನು ಸುಲಭವಾಗಿ ಮಾಡಿ ಮುಗಿಸುತ್ತೀರಿ. ಶುಭದಿನ: 16. ಶಿವಕವಚ ಸ್ತುತಿಸಿರಿ.





ವಿವಾಹಿತರಿಗೆ ಸಂತುಷ್ಟವಾದ ಸಮಯ. ಆರೋಗ್ಯ ಉತ್ತಮವಾಗಿ ಇರಲಿದೆ. ವ್ಯಾಪಾರ, ವ್ಯವಹಾರ ಮಾಡುವವರಿಗೆ ಪದೋನ್ನತಿ ಇದೆ. ವಾರದ ದ್ವಿತೀಯಾರ್ಧದಲ್ಲಿ ಹಲವು ಗುರಿಗಳನ್ನು ಸಾಧಿಸುತ್ತೀರಿ. ವೃತ್ತಿಪರರು ಹೆಚ್ಚು ಪರಿಶ್ರಮ ಹಾಕಿ ಕೆಲಸ ಮಾಡಲಿದ್ದೀರಿ. ಸ್ನೇಹಿತರು, ಸಂಬಂಧಿಕರ ಜತೆ ಉತ್ತಮ ಬಾಂಧವ್ಯ ಇರುತ್ತದೆ. ಈ ವಾರ ಮಿಶ್ರ ಫಲ ಅನುಭವಿಸಲಿದ್ದೀರಿ. ಶುಭದಿನ: 17. ಹನುಮಾನ್ ಚಾಲೀಸ್ ಓದಿರಿ.




ಕೌಟುಂಬಿಕ ವಿಷಯದಲ್ಲಿ ಉತ್ತಮ ಪ್ರಗತಿ. ನಿಮ್ಮ ವಿರೋಧಿಗಳು ಹೂಡಿರುವ ಷಡ್ಯಂತ್ರವನ್ನು ಮುರಿಯುವಲ್ಲಿ ಸಫಲರಾಗುವಿರಿ. ಕಾನೂನು ವಿಚಾರಗಳಲ್ಲಿ ನಿಮ್ಮ ಕೈ ಮೇಲಾಗಲಿದೆ. ವಯಸ್ಕರಿಗೆ ಸೂಕ್ತ ಸಂಬಂಧಗಳು ದೊರೆಯುವ ಸಾಧ್ಯತೆ ಇದೆ. ಉದ್ಯೋಗದ ಸಂದರ್ಶನಗಳಲ್ಲಿ ಯಶಸ್ಸು ದೊರೆಯಲಿದೆ. ಕೆಲವು ವಿಚಾರಗಳಲ್ಲಿ ಸಮಸ್ಯೆ ಎದುರಿಸಬೇಕಾಗುತ್ತದೆ. ಶುಭದಿನ: 18. ವಿಷ್ಣು ಸಹಸ್ರನಾಮ ಪಠಿಸಿರಿ.





ಶೈಕ್ಷಣಿಕ ಕ್ಷೇತ್ರದಲ್ಲಿ ಅತ್ಯುತ್ತಮವಾದ ಪ್ರಗತಿ. ಬರಹಗಾರರ ಬರವಣಿಗೆ ಮತ್ತಷ್ಟು ಆಕರ್ಷಕವಾಗಲಿದೆ. ಸಂತಾನ ಅಪೇಕ್ಷಿತ ದಂಪತಿಗೆ ಶುಭ ಸುದ್ದಿ ದೊರೆಯಲಿದೆ. ನಾನಾ ಕಾರಣಗಳಿಗೆ ಚಿಂತೆ ಕಾಡುತ್ತದೆ. ವಾರಾಂತ್ಯದ ತನಕ ಆರೋಗ್ಯ ಉತ್ತಮವಾಗುತ್ತದೆ. ಸಮಾಜದಲ್ಲಿ ನಿಮ್ಮ ವರ್ಚಸ್ಸು ಹೆಚ್ಚಲಿದೆ. ಹಣಕಾಸಿನ ವಿಚಾರದಲ್ಲಿ ಪೂರ್ವಾಪರ ಆಲೋಚಿಸಿ. ಶುಭದಿನ: 19. ಸೌಂದರ್ಯ ಲಹರಿ ಪಠಿಸಿರಿ.




ವ್ಯವಹಾರದಲ್ಲಿ ಉತ್ತಮ ಪ್ರಗತಿ. ಹಲವು ಬಗೆಯಲ್ಲಿ ಯಶಸ್ಸು ದೊರೆಯಲಿದೆ. ವೈವಾಹಿಕ ಜೀವನದಲ್ಲಿ ಸಂತೋಷ, ಸಂಭ್ರಮ ಪಡಲಿದ್ದೀರಿ. ಈ ಹಿಂದೆ ಸಂಗಾತಿ ಜತೆಗೆ ಭಿನ್ನಾಭಿಪ್ರಾಯ ಇದ್ದಲ್ಲಿ ನಿವಾರಣೆ ಆಗುತ್ತದೆ. ವಾರದ ದ್ವಿತೀಯಾರ್ಧದಲ್ಲಿ ನಿಮ್ಮ ಬೌದ್ಧಿಕ ಸಾಮರ್ಥ್ಯ ಹೆಚ್ಚಿಸಿಕೊಳ್ಳುವತ್ತ ಶ್ರಮ ಹಾಕುತ್ತೀರಿ. ಮಕ್ಕಳ ಪ್ರಗತಿ ಕಡೆಗೆ ಹೆಚ್ಚಿನ ಗಮನ ನೀಡುತ್ತೀರಿ. ಶುಭದಿನ: 18. ಕಾಲಭೈರವನ ಸೇವೆ ಮಾಡಿರಿ.





ನಿಮ್ಮ ಪ್ರೀತಿಪಾತ್ರರ ಜತೆಗಿನ ಬಾಂಧವ್ಯ ಗಟ್ಟಿಯಾಗಲಿದೆ. ಉದ್ಯೋಗದಲ್ಲಿ ಯಶಸ್ಸು ದೊರೆಯಲಿದೆ. ವಾರದ ದ್ವಿತೀಯಾರ್ಧದಲ್ಲಿ ವೃತ್ತಿ ಜೀವನದಲ್ಲಿ ಉತ್ತಮ ಫಲಿತಾಂಶ ದೊರೆಯಲಿದೆ. ಸಂದರ್ಶನಗಳಲ್ಲಿ ಯಶಸ್ಸು ಸಿಗಲಿದೆ. ವೈವಾಹಿಕ ಜೀವನ ಸಂತುಷ್ಟವಾಗಿರುತ್ತದೆ. ನಿಮ್ಮ ಮಕ್ಕಳ ಉದ್ಯೋಗ ವಿಚಾರದಲ್ಲಿ ಸಹಾಯ ಮಾಡಲಿದ್ದೀರಿ. ಶುಭದಿನ: 17. ಮಹಾಗಣಪತಿಗೆ ದೂರ್ವಾರ್ಚನೆ ಮಾಡಿರಿ.





ಸ್ವಂತ ಆಸ್ತಿ ಖರೀದಿ ಮಾಡಬೇಕು ಅಂದುಕೊಳ್ಳುತ್ತಿದ್ದರೆ ಅನುಕೂಲಕರ ಸನ್ನಿವೇಶ ಸಿಗಲಿದೆ. ಕೌಟುಂಬಿಕ ವಿಚಾರದಲ್ಲಿ ಸಣ್ಣ ಪುಟ್ಟ ಸಮಸ್ಯೆ ಎದುರಾಗಲಿದೆ. ಆಧ್ಯಾತ್ಮಿಕ ವಿಚಾರದ ಕಡೆಗೆ ಒಲವು ಹೆಚ್ಚಲಿದೆ. ಅಗತ್ಯ ಇರುವವರಿಗೆ ನೆರವಿನ ಹಸ್ತ ಚಾಚಲಿದ್ದೀರಿ. ವಾರಾಂತ್ಯದ ಹೊತ್ತಿಗೆ ನೀವು ಅಂದುಕೊಂಡ ಫಲಿತಾಂಶ ದೊರೆಯಲಿದೆ. ಆರೋಗ್ಯದಲ್ಲಿ ಚೇತರಿಕೆ ಕಾಣಿಸಿಕೊಳ್ಳಲಿದೆ. ಶುಭದಿನ: 19. ಚಂಡಿ ಪಾರಾಯಣ ಮಾಡಿರಿ.




ಹಲವು ಕ್ಷೇತ್ರದಲ್ಲಿ ಅಂದುಕೊಂಡ ಫಲಿತಾಂಶವನ್ನು ಸಾಧಿಸಲಿದ್ದೀರಿ. ನಿಮ್ಮ ಪರಿಶ್ರಮವನ್ನು ಉದ್ಯೋಗ ಸ್ಥಳದಲ್ಲಿ ಮೇಲಧಿಕಾರಿಗಳು ಮೆಚ್ಚುತ್ತಾರೆ. ಹಣಕಾಸಿನ ಸಂಗತಿಗಳಲ್ಲಿ ವಾರದ ದ್ವಿತೀಯಾರ್ಧದಲ್ಲಿ ಮೇಲುಗೈ ಸಾಧಿಸಲಿದ್ದೀರಿ. ನಿಮ್ಮ ವಿರೋಧಿಗಳಿಗೆ ತಕ್ಕ ಪ್ರತ್ಯುತ್ತರವನ್ನು ನೀಡಲಿದ್ದೀರಿ. ಸೋದರ ಸೋದರಿಯರ ಜತೆಗಿನ ಬಿಕ್ಕಟ್ಟನ್ನು ಬಗೆಹರಿಸಿಕೊಳ್ಳುವಿರಿ. ಶುಭದಿನ: 20. ಶ್ರೀ ವೆಂಕಟೇಶ್ವರ ಸ್ತೋತ್ರ ಪಠಿಸಿರಿ.




ಷೇರು ವ್ಯವಹಾರದಲ್ಲಿ ಹೆಚ್ಚಿನ ಪ್ರಮಾಣದ ಲಾಭ ಕಾಣುವಿರಿ. ಕಾನೂನು ವಿಚಾರದಲ್ಲಿ ಪ್ರಗತಿ. ವಿರೋಧಿಗಳ ವಿರುದ್ಧ ಮೇಲುಗೈ ಸಾಧಿಸುವಿರಿ. ಆರೋಗ್ಯ ಸಮಸ್ಯೆಗಳಿಗೆ ಪರಿಹಾರ ಮಾರ್ಗಗಳು ಗೋಚರವಾಗುತ್ತವೆ. ಹಲವು ರೀತಿಯಲ್ಲಿ ಸಂತೋಷದ ಕ್ಷಣಗಳನ್ನು ಅನುಭವಿಸಲಿದ್ದೀರಿ. ವ್ಯಾಪಾರ ಮತ್ತು ಸೇವಾ ವಲಯದಲ್ಲಿ ಕಾರ್ಯ ನಿರ್ವಹಿಸುವವರಿಗೆ ಏಳ್ಗೆ ಇದೆ. ಶುಭದಿನ: 22. ಗಣಪತಿ ಸುಬ್ರಹ್ಮಣ್ಯ ಜಪ ಮಾಡಿರಿ.




ವಾರದ ಶುರುವಿನಿಂದಲೇ ಶೈಕ್ಷಣಿಕ ಕ್ಷೇತ್ರದಲ್ಲಿ ಉತ್ತಮ ಫಲಿತಾಂಶ ಪಡೆಯುವಿರಿ. ಬೌದ್ಧಿಕ ಸಾಮರ್ಥ್ಯ ವೃದ್ಧಿ ಆಗಲಿದೆ. ಹೆಚ್ಚುವರಿ ಆದಾಯ ಮೂಲದಿಂದ ಲಾಭವನ್ನು ನಿರೀಕ್ಷೆ ಮಾಡಬಹುದು. ನಿಮ್ಮ ಜೀವನಮಟ್ಟ ಹೆಚ್ಚಿಸಿಕೊಳ್ಳಲು ಶ್ರಮಿಸುತ್ತೀರಿ. ಸ್ನೇಹಿತರಿಂದ ಶುಭ ವಾರ್ತೆ ಕೇಳಲಿದ್ದೀರಿ. ನಿಮ್ಮ ಆರೋಗ್ಯ ಸ್ಥಿತಿ ಅಷ್ಟೇನೂ ಉತ್ತಮವಾಗಿರುವುದಿಲ್ಲ. ಶುಭದಿನ: 21. ದಕ್ಷಿಣಾಮೂರ್ತಿ ಸ್ತೋತ್ರ ಪಠಣ ಮಾಡಿರಿ.